**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ**

**ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆಃ 226/2016**

ಚಾಸಾಃ8 ಪ್ರಾಸಾಃ7

| | | |
|---|---|---|
| ಹೆಸರು | : | ಅಬ್ದುಲ್ ಖಾನ್ |
| ಗಂಡನ/ತಂದೆಯ ಹೆಸರು | : | ಅಜಿಜ್ ಖಾನ್ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ, ಚನ್ನಪಟ್ಟಣ ಟೌನ್ |
| ವಾಸ | : | ಚನ್ನಪಟ್ಟಣ. |

**ದಿನಾಂಕ 11.07.2025 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನಾನು 2012 ರಿಂದ 2017 ರವರೆಗೆ ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 02.01.2016 ರಂದು ನಾನು ಠಾಣಾ ಪ್ರಬಾರದಲ್ಲಿದ್ದಾಗ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಮಹಾಲಕ್ಷ್ಮಿರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಬಂದ ಮಾಹಿತಿಯ ಮೇರೆಗೆ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿದ್ದ ಚಾಸಾ1 ರವರ ಹೇಳಿಕೆಯನ್ನು ಚಾಸಾ6 ರವರ ಸಮಕ್ಷಮ ಪಡೆದು ಠಾಣೆಗೆ ವಾಪಾಸ್ಸಾಗಿ ಠಾಣಾ ಮೊಕದ್ದಮ್ಮೆ ಸಂಖ್ಯೆ 2/2016 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1

ಎಂದು ಈಗಾಗಲೇ ಗುರುತಿಸಲಾಗಿದ್ದು, ದೂರಿನ ಮೇಲೆ ಸಾಕ್ಷಿಯ ಸಹಿ ಇರುವುದಿಲ್ಲ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಪ್ರಥಮ ವರ್ತಮಾನ ವರದಿಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಹಲ್ಲೆಯ ಹಿನ್ನಲೆಯಲ್ಲಿ ಚಾಸಾ1 ರವರು ದಿಃ01.01.2016 ರಂದು ಆಸ್ಪತ್ರೆಗೆ ದಾಖಲಾಗಿದ್ದರು. ನನಗೆ ದಿಃ02.01.2016 ರಂದು ಮಾಹಿತಿ ಬಂದ ಕಾರಣ ನಾನು ದಿಃ02.01.2016 ರಂದು ಆಸ್ಪತ್ರೆಗೆ ಹೋಗಿ ಮಾಹಿತಿಯನ್ನು ಪಡೆದಿರುತ್ತೇನೆ.

ದಿಃ08.01.2016ರಂದು ಸುಂಕದಕಟ್ಟೆ ಗ್ರಾಮಕ್ಕೆ ಭೇಟಿ ನೀಡಿ ಚಾಸಾ1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ5ರವರ ಸಮಕ್ಷಮ ಬೆಳಗ್ಗೆ 12.00-12.45 ಗಂಟೆಯವರೆಗೆ ಮಹಜರ್ ಕ್ರಮವನ್ನು ಕೈಗೊಂಡಿರುತ್ತೇನೆ.. ಸ್ಥಳ ಪಂಚನಾಮೆಯ ಕಾಲದಲ್ಲಿ ಚಾಸಾ-1 ರವರು ಹಾಜರುಪಡಿಸಿದ ಈಗ ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಕುಡುಗೋಲನ್ನು ಅಮಾನತ್ತು ಪಡಿಸಿರುತ್ತೇನೆ. ಅಮಾನತ್ತು ಪಡಿಸಿಕೊಂಡ ವಸ್ತುವನ್ನು ಠಾಣಾ ಮಾಲುಪಟ್ಟಿ ಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಸ್ಥಳ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಕಬ್ಬಿಣದ ಕುಡುಗೋಲನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಕುಡುಗೋಲನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಚಾಸಾ1 ರವರು ಒಳರೋಗಿಯಾಗಿ ದಾಖಲಾಗಿದ್ದ ಕಾರಣ ದಿಃ08.01.2016 ರಂದು ವಿಳಂಬವಾಗಿ ಮಹಜರ್ ಕ್ರಮ ಕೈಗೊಂಡಿರುತ್ತೇನೆ. ದಿನಾಂಕ 08.01.2016 ರಂದು ಚಾಸಾ-2 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ -2 ಮತ್ತು 4 ರವರು ನನ್ನ ಮುಂದೆ ನಿಪಿ-3 ಮತ್ತು ನಿಪಿ-4 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ತನಿಖೆಯನ್ನು ಚಾಸಾ-9 ರವರು ವಹಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

ಆರೋಪಿ ಪರ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ಪರಿಶೀಲಿಸಿ, ತಿರಸ್ಕರಿಸಲಾಯಿತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**